## ನಿಮ್ಮೊಡನೆ

# ಆಮೂಲಾಗ್ರ ಬದಲಾವಣೆಯಿಂದ ಶಿಕ್ಷಣಕ್ಕೆ ಶಕ್ತಿಮದ್ದು

ಇತ್ತೀಚಿನ ಎರಡು ವಿದ್ಯಮಾನಗಳು ಶೈಕ್ಷಣಿಕ ಕ್ಷೇತ್ರದ ಸಂಕಷ್ಟ ಹಾಗೂ ವಿರೋಧಾಭಾಸಗಳಿಗೆ ನಿದರ್ಶನದಂತಿವೆ. ವಿದ್ಯಾರ್ಥಿಗಳು ಮಾನಸಿಕ ಒತ್ತಡಕ್ಕೊಳಗಾಗುವುದನ್ನು ತಡೆಯುವ ಉದ್ದೇಶದಿಂದ ‘ಓಪನ್ ಬುಕ್’ ಪರೀಕ್ಷಾ ಪದ್ಧತಿಯನ್ನು ಪರಿಚಯಿಸುವ ಚಿಂತನೆ ಮೊದಲ ವಿದ್ಯಮಾನ. ಉದ್ಯೋಗ ಕಾಯಂಗೊಳಿಸುವುದು ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸಿ ಸರ್ಕಾರಿ ಪ್ರಥಮದರ್ಜೆ ಕಾಲೇಜುಗಳ ಅತಿಥಿ ಉಪನ್ಯಾಸಕರು ನಡೆಸುತ್ತಿರುವ ಮುಷ್ಕರ ಮತ್ತೊಂದು ವಿದ್ಯಮಾನ. ಓಪನ್ ಬುಕ್ ಪರೀಕ್ಷೆಯ ಚಿಂತನೆ ಶಿಕ್ಷಣ ಕ್ಷೇತ್ರದ ಬಗೆಗಿನ ಗೊಂದಲಗಳ ಮುಂದುವರಿಕೆಯಂತೆ ಕಾಣಿಸಿದರೆ, ಅತಿಥಿ ಉಪನ್ಯಾಸಕರ ಹಕ್ಕೊತ್ತಾಯ ಬೋಧಕವರ್ಗದ ಬಗೆಗಿನ ವ್ಯವಸ್ಥೆಯ ನಿರ್ಲಕ್ಷ್ಯದಂತಿದೆ. ಪರಸ್ಪರ ಸಂಬಂಧವಿಲ್ಲದಂತೆ ಈ ವಿದ್ಯಮಾನಗಳು ಕಾಣಿಸಿದರೂ, ಶಿಕ್ಷಣ ವ್ಯವಸ್ಥೆಯಲ್ಲಿನ ಅರಾಜಕತೆಗೆ ಇವು ನಿದರ್ಶನದಂತಿವೆ.

ವಿದ್ಯಾರ್ಥಿಗಳ ಪರೀಕ್ಷಾ ಒತ್ತಡ ಕಡಿಮೆಯಾಗಬೇಕೆನ್ನುವುದರಲ್ಲಿ ಯಾರಿಗೂ ತಕರಾರಿಲ್ಲ. ಆದರೆ, ಓಪನ್ ಬುಕ್ ಪರೀಕ್ಷೆಯಿಂದ ವಿದ್ಯಾರ್ಥಿಗಳ ಮೇಲಿನ ಮಾನಸಿಕ ಒತ್ತಡ ಕಡಿಮೆಯಾಗುತ್ತದೆಂದು ನಿರೀಕ್ಷಿಸುವುದು ಕರ್ನಾಟಕದ ಸಾಮಾಜಿಕ ಸಂದರ್ಭದಲ್ಲಂತೂ ವಸ್ತುನಿಷ್ಠ ಚಿಂತನೆಯಲ್ಲ. ಪುಸ್ತಕ ಸಹಿತ ಪರೀಕ್ಷೆ ವಿದ್ಯಾರ್ಥಿಗಳ ಮೇಲಿನ ಒತ್ತಡವನ್ನು ಕಡಿಮೆಯಾಗಿಸುತ್ತದೆ ಎನ್ನುವುದು ಸರಳ ಗ್ರಹಿಕೆ. ಪುಸ್ತಕಗಳೊಂದಿಗೆ ಪರೀಕ್ಷೆ ಬರೆಯುವುದು ವಿದ್ಯಾರ್ಥಿಯ ಸಾಮರ್ಥ್ಯ, ಸ್ವಂತಿಕೆಗೆ ಸವಾಲೊಡ್ಡುವಂತಹದ್ದು. ಓಪನ್ ಬುಕ್ ಪರೀಕ್ಷೆ ಎನ್ನುವುದು ಕರ್ನಾಟಕದ ಮಟ್ಟಿಗೆ ಒಂದು ಅನುಸರಿಸಲಾಗದ ಆದರ್ಶವಷ್ಟೇ. ಈ ಆದರ್ಶ ಕಾರ್ಯರೂಪಕ್ಕೆ ಬರಬೇಕಾದರೆ, ಶಿಕ್ಷಣ ವ್ಯವಸ್ಥೆಯಲ್ಲಿ ಆಮೂಲಾಗ್ರ ಬದಲಾವಣೆಯಾಗಬೇಕು. ತಳಮಟ್ಟದ ವ್ಯವಸ್ಥೆಯನ್ನು ಯಥಾಸ್ಥಿತಿಯಲ್ಲಿ ಉಳಿಸಿ, ಉನ್ನತ ಶಿಕ್ಷಣದಲ್ಲಿ ಬದಲಾವಣೆ ತರಲು ಪ್ರಯತ್ನಿಸುವುದು ವಿವೇಕದ ನಡೆಯಲ್ಲ. ಪರೀಕ್ಷಾ ಒತ್ತಡ ಎನ್ನುವುದು ಉನ್ನತ ಶಿಕ್ಷಣಕ್ಕೆ ಸೀಮಿತವಾದುದೂ ಅಲ್ಲ. ಪ್ರಾಥಮಿಕ ಪೂರ್ವ ತರಗತಿಗಳಿಂದ ಹಿಡಿದು ಪಿಯುಸಿಯವರೆಗೆ ವಿದ್ಯಾರ್ಥಿಗಳು ಪರೀಕ್ಷೆಗಳ ಅಗ್ನಿದಿವ್ಯಕ್ಕೆ ತಮ್ಮನ್ನೊಡ್ಡಿಕೊಳ್ಳುತ್ತಲೇ ಇದ್ದಾರೆ.


2023ರಲ್ಲಿ ಬಿ.ಟೆಕ್. ವಿದ್ಯಾರ್ಥಿಯೊಬ್ಬ ಆತ್ಮಹತ್ಯೆ ಮಾಡಿಕೊಂಡ ಘಟನೆಯ ಹಿನ್ನೆಲೆಯಲ್ಲಿ, ಶಿಕ್ಷಣ ಸಂಸ್ಥೆಗಳಲ್ಲಿನ ಶೈಕ್ಷಣಿಕ ಒತ್ತಡ ಕುರಿತು ಅಧ್ಯಯನ ನಡೆಸಲು ನೇಮಕಗೊಂಡಿದ್ದ ಸಮಿತಿ, ಉನ್ನತ ಶಿಕ್ಷಣದ ಎಲ್ಲ ಹಂತ–ವಿಭಾಗಗಳಲ್ಲೂ ಓಪನ್ ಬುಕ್ ಪರೀಕ್ಷೆಯ ಸಾಧ್ಯತೆಗಳನ್ನು ಪರಿಶೀಲಿಸಲು ಪ್ರತ್ಯೇಕ ಸಮಿತಿ ರಚಿಸುವಂತೆ ಉನ್ನತ ಶಿಕ್ಷಣ ಇಲಾಖೆಗೆ ಸಲಹೆ ನೀಡಿದೆ. ಈ ಸಲಹೆಯ ಉದ್ದೇಶ ಒಳ್ಳೆಯದಾಗಿದ್ದರೂ, ಅದು ಸದ್ಯದ ಶಿಕ್ಷಣ ವ್ಯವಸ್ಥೆಯಲ್ಲಿ ಎಷ್ಟರಮಟ್ಟಿಗೆ ಕಾರ್ಯಸಾಧು ಎನ್ನುವುದನ್ನು ಯೋಚಿಸಬೇಕು. ಪ್ರಸಕ್ತ ಅಂಕಕೇಂದ್ರಿತ ಶಿಕ್ಷಣ ವ್ಯವಸ್ಥೆ ವಿದ್ಯಾರ್ಥಿಗಳಲ್ಲಿನ ವಿಶ್ಲೇಷಣಾ ಸಾಮರ್ಥ್ಯವನ್ನು ಕುಂಠಿತಗೊಳಿಸಿದೆ. ವಿಷಯವನ್ನು ಮನವರಿಕೆ ಮಾಡುವುದಕ್ಕಿಂತಲೂ, ಪ್ರಶ್ನೋತ್ತರಗಳಿಗೆ ವಿದ್ಯಾರ್ಥಿಗಳನ್ನು ಸಜ್ಜುಗೊಳಿಸುವ ವ್ಯವಸ್ಥೆ ನಮ್ಮದಾಗಿದೆ. ಈ ವ್ಯವಸ್ಥೆ ಬದಲಾಗದೆ, ಪುಸ್ತಕಗಳೊಟ್ಟಿಗೆ ಪರೀಕ್ಷೆ ಬರೆಸುವ ಪ್ರಯೋಗ ಯಶಸ್ವಿಯಾಗುವುದು ಸಾಧ್ಯವಿಲ್ಲ. ವಿದ್ಯಾರ್ಥಿಗಳಿಗಿಂತಲೂ ಮೊದಲು ಬೋಧಕ ಸಿಬ್ಬಂದಿಯನ್ನು ಹೊಸ ಸಾಧ್ಯತೆಗೆ ಒಗ್ಗಿಸುವುದು ಸುಲಭಸಾಧ್ಯವಾದುದೇನಲ್ಲ. ಈ ಪ್ರಕ್ರಿಯೆ ಪ್ರಾಥಮಿಕ ತರಗತಿಗಳಲ್ಲೇ ಹಂತ ಹಂತದಲ್ಲೇ ಪರಿಚಯಗೊಳ್ಳಬೇಕು. ಇದಾವುದೂ ನಡೆಯದೆ, ಉನ್ನತ ಶಿಕ್ಷಣದಲ್ಲಿ ಒಮ್ಮಿಂದೊಮ್ಮೆಗೆ ಓಪನ್ ಬುಕ್ ಪರೀಕ್ಷೆಯನ್ನು ಪರಿಚಯಿಸುವುದು ಅನಗತ್ಯ ಗೊಂದಲಗಳಿಗೆ ಕಾರಣವಾಗುವುದರ ಜೊತೆಗೆ, ಶಿಕ್ಷಣದಲ್ಲಿ ಗುಣಮಟ್ಟದ ಕುಸಿತಕ್ಕೂ ಅವಕಾಶ ಕಲ್ಪಿಸುತ್ತದೆ.

ವಿದ್ಯಾರ್ಥಿಗಳ ಮಾನಸಿಕ ಒತ್ತಡದ ಬಗ್ಗೆ ಯೋಚಿಸುವ ಸರ್ಕಾರ, ಅತಿಥಿ ಉಪನ್ಯಾಸಕರು ದಶಕಗಳ ಕಾಲದಿಂದ ಅತಂತ್ರ ಪರಿಸ್ಥಿತಿಯಲ್ಲಿರುವುದಕ್ಕೆ ತಾನೇ ಕಾರಣವಾಗಿರುವುದರ ಬಗ್ಗೆ ಆತ್ಮಾವಲೋಕನ ಮಾಡಿಕೊಳ್ಳಬೇಕು. ಸರ್ಕಾರಿ ಪದವಿ ಕಾಲೇಜುಗಳು ಬಹುತೇಕ ಅತಿಥಿ ಉಪನ್ಯಾಸಕರನ್ನೇ ಅವಲಂಬಿಸಿವೆ. ರಾಜ್ಯದಲ್ಲಿರುವ 420 ಸರ್ಕಾರಿ ಪದವಿ ಕಾಲೇಜುಗಳಲ್ಲಿ 11500ಕ್ಕೂ ಹೆಚ್ಚು ಅತಿಥಿ ಉಪನ್ಯಾಸಕರು ಕಾರ್ಯ ನಿರ್ವಹಿಸುತ್ತಿದ್ದಾರೆ. ಉದ್ಯೋಗ ಕಾಯಂ ಆಗಬಹುದೆನ್ನುವ ನಿರೀಕ್ಷೆಯಲ್ಲಿ, ಕನಿಷ್ಠ ಗೌರವಧನದೊಂದಿಗೆ ಹದಿನೈದು ಇಪ್ಪತ್ತು ವರ್ಷಗಳನ್ನು ಕಳೆದವರಿದ್ದಾರೆ. ಆಗೊಮ್ಮೆ ಈಗೊಮ್ಮೆ ಸಣ್ಣಪುಟ್ಟ ಬೇಡಿಕೆಗಳು ಈಡೇರಿರುವುದು ಬಿಟ್ಟರೆ ಅತಿಥಿ ಉಪನ್ಯಾಸಕರ ಜೀವನ ಅತಂತ್ರವಾಗಿಯೇ ಮುಂದುವರೆದಿದೆ. ಉದ್ಯೋಗ ಕಾಯಂಗೊಳ್ಳುವ ನಿರೀಕ್ಷೆಯಲ್ಲಿಯೇ ಹಲವು ಅಭ್ಯರ್ಥಿಗಳ ವಯೋಮಿತಿ ಮೀರಿದೆ. ಪಿಎಚ್.ಡಿ. ಸೇರಿದಂತೆ ಸಮರ್ಪಕ ವಿದ್ಯಾರ್ಹತೆ ಹಾಗೂ ದೀರ್ಘ ಕಾಲದ ಬೋಧನೆಯ ಅನುಭವ ಹೊಂದಿರುವ ಅತಿಥಿ ಉಪನ್ಯಾಸಕರ ಹುದ್ದೆಗಳನ್ನು ಕಾಯಂಗೊಳಿಸಲು ಸರ್ಕಾರ ಮನಸ್ಸು ಮಾಡಿಲ್ಲ. ಜಿಲ್ಲೆಗೊಂದು ವಿಶ್ವವಿದ್ಯಾಲಯ ಸ್ಥಾಪಿಸುವ ಸರ್ಕಾರಕ್ಕೆ ಉಪನ್ಯಾಸಕರನ್ನು ಕಾಯಂಗೊಳಿಸುವುದು ಲಾಭದಾಯಕವೆನ್ನಿಸಿಲ್ಲ. ಇದರಿಂದಾಗಿ ಉನ್ನತ ಶಿಕ್ಷಣದ ಗುಣಮಟ್ಟ ವರ್ಷದಿಂದ ವರ್ಷಕ್ಕೆ ಕುಸಿಯುತ್ತಿದೆ.

ಅತಿಥಿ ಉಪನ್ಯಾಸಕರ ಬೇಡಿಕೆಗಳನ್ನು ಬಗೆಹರಿಸದೆ ಶಿಕ್ಷಣ ಕ್ಷೇತ್ರದಲ್ಲಿನ ಸುಧಾರಣೆಗಳ ಬಗ್ಗೆ ಆಡುವ ಮಾತುಗಳು ಹುಸಿ ಕಾಳಜಿಯವು. ಶಿಕ್ಷಣ ಕ್ಷೇತ್ರದಲ್ಲಿ ಆಗಬೇಕಿರುವ ಸುಧಾರಣೆ ವಿದ್ಯಾರ್ಥಿಗಳಿಗೆ ಸಂಬಂಧಿಸಿರುವುದೂ ಹೌದು, ಬೋಧಕರಿಗೆ ಸಂಬಂಧಿಸಿದ್ದೂ ಹೌದು.

■ **ರಘುನಾಥ ಚ.ಹ.**

**ವಿದ್ಯಾರ್ಥಿಗಳ ಮಾನಸಿಕ ಒತ್ತಡದ ಬಗ್ಗೆ ಯೋಚಿಸುವ ಸರ್ಕಾರ, ಅತಿಥಿ ಉಪನ್ಯಾಸಕರು ಹತ್ತಾರು ವರ್ಷಗಳಿಂದ ಅತಂತ್ರ ಪರಿಸ್ಥಿತಿಯಲ್ಲಿರುವುದರ ಬಗ್ಗೆ ಆತ್ಮಾವಲೋಕನ ಮಾಡಿಕೊಳ್ಳಬೇಕು. ಶಿಕ್ಷಣ ಕ್ಷೇತ್ರದಲ್ಲಿ ಆಗಬೇಕಿರುವ ಸುಧಾರಣೆ ವಿದ್ಯಾರ್ಥಿಗಳಿಗೆ ಸಂಬಂಧಿಸಿರುವುದೂ ಹೌದು, ಬೋಧಕರಿಗೆ ಸಂಬಂಧಿಸಿದ್ದೂ ಹೌದು.**



ಈಶ್ವರ್